| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 533/2024**

ಸಾಕ್ಷಿದಾರನ ಹೆಸರು ಃ ಸಚೇಂದ್ರ ಪಿ.ಡಬ್ಲ್ಯೂಃ 1

ತಂದೆಯ ಹೆಸರುಃ ಶ್ರೀಧರ ಅಮಿನ್ ಸಿ.ಡಬ್ಲ್ಯೂಃ 1

ಪ್ರಾಯ ಃ 48 ವರ್ಷ

ಉದ್ಯೋಗ ಃ ವ್ಯಾಪಾರ

ವಾಸ ಃ ನಂದಳಿಕೆ

ದಿನಾಂಕ 09-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿವುದಿಲ್ಲ.

ಚಾಸಾ-2 ಪರಿಚಯ ಇದೆ. ಅವರು ನಮ್ಮ ಅಂಗಡಿಯಪಕ್ಕದವರು. ಚಾಸಾ 3 ಪರಿಚಯ ಇಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ಅಪಘಾತದಿಂದ ಯಾರು ಯಾರಿಗೆ ಗಾಯವಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅಪಘಾತಕ್ಕೆ ಏನೂ ಕಾರಣ ಎಂದು ಗೊತ್ತಿರುವುದಿಲ್ಲ. ನಾನು ಯಾರನ್ನು ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುವುದಿಲ್ಲ. ನಾನು ಅಪಘಾತ ಕುರಿತು ಯಾವುದೇ ಪಿರ್ಯಾದಿ ನೀಡಿರುವುದಿಲ್ಲ.

ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ, ಎಲ್ಲಿ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ಘಟನೆ ಕುರಿತು ಮರುಹೇಳಿಕೆ ನೀಡಿರುವುದಿಲ್ಲ.

ತಕ್ಷೀರಿಗೆ ಸಂಬಂಧಿಸಿದ ಭಾವಚಿತ್ರ ನೋಡಿ ಗುರುತಿಸಿರುವುದಿಲ್ಲ.
(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈಗ ನನಗೆ ಓದಿ ಹೇಳಿದಂತೆ ದಿಃ 25-01-2024 ರಂದು ನಾನು ಪೋಲಿಸರಿಗೆ ಪಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ದಿಃ 26-01-2024 ರಂದು ನಾನು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಎಮ್ ಕೆ ವಿ ಕೆ ವಕೀಲರಿಂದ ಃ ನಾನು ಅಪಘಾತದ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತ ನನ್ನ ಅಂಗಡಿಯ 100 ಮೀ ದೂರದಲ್ಲಿ ಅಪಘಾತವಾಗಿದೆ. ಅಪಘಾತ ಸಂಜೆ 4.10 ಕ್ಕೆ ಆಗಿರುತ್ತದೆ. ಪೋಲಿಸರು ಘಟನೆ ಆದ ಅರ್ಧ ಗಂಟೆಯ ನಂತರ ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರು ಬಂದಾಗ ನಾನು ಸ್ಥಳದಲ್ಲಿ ಇದ್ದೆ. ನಾನು ಅಪಘಾತ ಸ್ಥಳಕ್ಕೆ ಹೋದಾಗ ಸಾಕಷ್ಟು ಜನ ಸೇರಿದ್ದರು. ಸ್ಥಳಕ್ಕೆ ಹೋದಾಗ ಎರಡು ಕಾರಿನ ಡ್ರೈವರ್ ಗಳು ಕಾರಿನ ಹೊರಗೆ ಇದ್ದರು. ಅಂದರೆ ಕಾರು ನಿಂತಿತ್ತು. ಒಂದು ಕಾರು ರಸ್ತೆಯ ಎಡ ಸೈಡ್ ನಲ್ಲಿ ಮತ್ತೊಂದು ಕಾರು ರಸ್ತೆಯ ಬಲ ಭಾಗದಲ್ಲಿ ನಿಂತಿತ್ತು. ಪೋಲಿಸರು ಸ್ಥಳದಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಬರುವಾಗ ಸ್ಥಳದಲ್ಲಿ ಜನ ಇದ್ದರು. ಕಾರುಗಳು ಎರಡು ನಿಂತ ಜಾಗ ತಿರುವು ಇರುವ ಜಾಗ. ನಾನು ಸ್ಥಳಕ್ಕೆ ಹೋದಾಗ ಕಾರಿನ ಬ್ರೇಕ್ ಗುರುತುಗಳು ಇದ್ದವು. ನಾನು ಸ್ಥಳಕ್ಕೆ ಹೋದ ಮೇಲೆ ಆರೋಪಿಯ ಕಾರು ಕಾರ್ಕಳ ಕಡೆಯಿಂದ ಬೆಳ್ಮಣ್ ಕಡೆಗೆ ಹೋಗುತ್ತಿತ್ತು ಎಂದು ಗೊತ್ತಾಗಿರುತ್ತದೆ. ಬೆಳ್ಮಣ್ ಕಡೆಗೆ ಹೋಗುತ್ತಿದ್ದ ಕಾರಿನ ಬ್ರೇಕ್ ಮಾರ್ಕ್ ಇತ್ತು. ಇನ್ನೊಂದು ಕಾರು ಬೆಳ್ಮಣ್ ಕಡೆಯಿಂದ

ಕಾರ್ಕಳಕ್ಕೆ ಬರುತ್ತಿತ್ತು. ಆ ಕಾರಿನ ಬ್ರೇಕ್ ಮಾರ್ಕ್ ಇರಲಿಲ್ಲ. ಆ ದಿನ ಕಾರ್ಕಳದ ಅತ್ತೂರು ಚರ್ಚ್ ನಲ್ಲಿ ಸೆಟ್ಮೇರಿಸ್ ಜಾತ್ರೆ ನಡೆಯುತಿತ್ತು. ಅಪಘಾತ ನಡೆದ ಸ್ಥಳ ರಾಷ್ಟ್ರೀಯ ಹೆದ್ದಾರಿ. ಅತ್ತೂರಿನಲ್ಲಿ  ಜಾತ್ರೆ ಇದ್ದ ಕಾರಣ ಆ ರಸ್ತೆಯಲ್ಲಿ ಸಾಕಷ್ಟು ವಾಹನ ಸಂಚಾರ ಇತ್ತು. ಅತ್ತೂರಿನಲ್ಲಿ ಜಾತ್ರೆ ಇದ್ದ ಕಾರಣ ಹೆಚ್ಚಿನ ವಾಹನ ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ಹೋಗುತ್ತಿದ್ದವು. ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ಹೋಗುವ ವಾಹನಗಳು ಒಂದನೊಂದು ಹಿಂದಿಕ್ಕಿ ಹೋಗುತ್ತಿದ್ದವು. ಈ ಅಪಘಾತ ಆಗಲು ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ವಾಹನಮ ಒಂದನೊಂದು ಹಿಂದಿಕ್ಕಿ ಬಂದದೇ ಕಾರಣ. ರಸ್ತೆಯ ಇಕ್ಕೆಲಗಳಲ್ಲಿ ಹಾಗೂ ಮಧ್ಯದಲ್ಲಿ ಬಿಳಿ ಪಟ್ಟಿ ಹಾಕಿರುತ್ತಾರೆ, ಮಧ್ಯದ ಪೆಟಿಂಗ್ ಗುರುತುಗಳನ್ನು ದಾಟದೇ ಎಡಗಡೆಯೇ ವಾಹನ ಸಂಚರಿಸಿದರೆ ಅಪಘಾತ ಸಂಭಂವಿಸುವುದಿಲ್ಲ ಎಂದರೆ ಸರಿ. ನಾನು ನೋಡಿದ ರಸ್ತೆಯಲ್ಲಿದ್ದ ಬ್ರೇಕ್ ಗುರುತು ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ಬರುವ ರಸ್ತೆಯ ಎಡಗಡೆಯಲ್ಲಿ ಇತ್ತು. ರಸ್ತೆಯ ಮಧ್ಯಭಾಗಕ್ಕೆ ಹಾಕಿದ ಪೆಂಟ್ ನ ಎಡಭಾಗಕ್ಕೆ ಇತ್ತು. ಈಗ ನಾನು ನೋಡುತ್ತಿರುವ ಭಾವಚಿತ್ರ ಅಪಘಾತ ಸ್ಥಳದ ರಸ್ತೆಯದಾಗಿರುತ್ತದೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಇನ್ನೊಂದು ಭಾವಚಿತ್ರ ಆ ದಿನ ಆರೋಪಿ ಚಲಾಯಿಸುತ್ತಿದ್ದ ಕಾರಿನ ಚಿತ್ರ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಈ ಭಾವಚಿತ್ರದಲ್ಲಿ ಕಾಣಿಸಿದಂತೆ ರಸ್ತೆಯ ಮಧ್ಯದ ಪೆಟಿಂಗ್ ಗುರುತು ಇರುವ ಎಡಭಾಗದಲ್ಲಿ ಬ್ರೇಕ್ ಗುರುತು ಇದೆ. ನಿಪಿ-1 ರಲ್ಲಿ ಏನೂ ಬರೆದಿದೆ ಎಂದು ತಿಳಿದುಕೊಂಡಿರದೇ ಸಹಿ ಹಾಕಿರುತ್ತೇನೆ. ನನಗೆ ಯಾರು ಅಪಘಾತದ ಬಗ್ಗೆ ತಿಳಿಸಿರಲಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the other witnesses. As the eye witness Pw 1 have completly turned hostile to the case of prosecution. No purpose will be served by issuance of summons to other witnesses. Hence by rejecting the prayer of learned APP evidence of other witnesses are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 20-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala